# ರಾಷ್ಟ್ರೀಯ ಆಹಾರ ತಂತ್ರಜ್ಞಾನ ಸಂಸ್ಥೆ, ಉದ್ಯಮಶೀಲತೆ ಮತ್ತು ನಿರ್ವಹಣೆ, ತಂಜಾವೂರ (ತಮಿಳನಾಡು) ಇವರ ಜೋತೆ ಬಾಗಲಕೋಟ ವಿಶ್ವವಿದ್ಯಾಲಯವು ಮಾಡಿಕೊಂಡ ಒಡಂಬಡಿಕೆಯ (MoU)






**ಹೊಸದಾಗಿ ಪ್ರಾರಂಭವಾದ ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿಯು ದಿನಾಂಕ : 05-01-2024 ರಂದು ಪ್ರತಿಷ್ಠಿತ ಸಂಸ್ಥೆಯಾದ ರಾಷ್ಟ್ರೀಯ ಆಹಾರ ತಂತ್ರಜ್ಞಾನ ಸಂಸ್ಥೆ, ಉದ್ಯಮಶೀಲತೆ ಮತ್ತು ನಿರ್ವಹಣೆ, ತಂಜಾವೂರ (ತಮಿಳನಾಡು) ಇವರ ಜೊತೆ ಒಡಂಬಡಿಕೆಯನ್ನು (MoU) ಮಾಡಿಕೊಳ್ಳಲಾಯಿತು.**

ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ ಮತ್ತು ತಂಜಾವೂರಿನ ರಾಷ್ಟ್ರೀಯ ಆಹಾರ ತಂತ್ರಜ್ಞಾನ ಸಂಸ್ಥೆ, ಉದ್ಯಮಶೀಲತೆ ಮತ್ತು ನಿರ್ವಹಣೆ (National Institute of Food Technology, Entrepreneurship and Management, Tanjavur, Tamilanadu) ಇವರ ನಡುವೆ ಒಡಂಬಿಡಿಕೆ (Memorandum of Understanding) ಯನ್ನು ಮಾಡಿಕೋಳ್ಳಲಾಯಿತು. ಈ ಸಂದರ್ಭದಲ್ಲಿ ಬಾಗಲಕೋಟ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಪ್ರೊ. ಆನಂದ್ ಶರದ ದೇಶಪಂಡೆ ಅವರು ಮತ್ತು NIFTEM ನ ನಿರ್ದೇಶಕರಾದ ಡಾ. ವಿ. ಪಾಲಾನಿಮುತ್ತು ಅವರು ಸಹಿ ಹಾಕಿ ಒಡಂಬಿಡಿಕೆಯನ್ನು ಯಶಸ್ವಿಗೊಳಿಸಿದರು.

ಈ ಒಪ್ಪಂದದ ಮುಖ್ಯ ಉದ್ದೇಶಗಳು: ಈ ಎರಡು ಸಂಸ್ಥೆಗಳು ಶಿಕ್ಷಕ ಮತ್ತು ಆಡಳಿತಾತ್ಮಕ ಸಿಬ್ಬಂದಿಗಳ ನಡುವೆ ನೇರ ಸಂಪರ್ಕ ಮತ್ತು ಸಹಯೋಗವನ್ನು ಪ್ರೋತ್ಸಾಹಿಸುತ್ತವೆ. ಇವು ಸಂಭಂದಿಸಿದ ವಿಷಯಗಳಲ್ಲಿ ನಿರಂತರ ಸಂಶೋಧನೆ ನಡೆಸುವುದಕ್ಕೆ ಹೆಚ್ಚಿನ ಅವಕಾಶ ನೀಡುತ್ತವೆ. ಈ ಒಪ್ಪಂದ ಎರಡೂ ಸಂಸ್ಥೆಗಳ ನಡುವೆ ಸ್ಥಾಯಿಯಾಗಿ ಸಹಯೋಗ ನಡೆಸಲು ಹೆಚ್ಚು ಅವಕಾಶ ನೀಡುತ್ತದೆ. ಮತ್ತು ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಹೆಚ್ಚಿನ ವಿದ್ಯಾರ್ಜನೆಗಾಗಿ ಅನುಕೂಲವಾಗಲಿದೆ. ಇದು ಬಾಗಲಕೋಟ ವಿಶ್ವವಿದ್ಯಾಲಯಕ್ಕೆ ಹೆಮ್ಮೆಯ ವಿಷಯವಾಗಿದೆ.